# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 753
2. ಸದಸ್ಯರ ಹೆಸರು : ಶ್ರೀ . ಡಿ.ಟಿ. ಶ್ರೀನಿವಾಸ್
3. ಉತ್ತರಿಸಬೇಕಾದ ದಿನಾಂಕ : 21.08.2026.
4. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಹಿರಿಯೂರು ತಾಲ್ಲೂಕಿನ ಜವನಗೊಂಡನಹಳ್ಳಿ ಭಾಗಕ್ಕೆ ಸರ್ಕಾರದಿಂದ ರೂ.244.00 ಕೋಟಿ ವೆಚ್ಚದಲ್ಲಿ 17 ಕೆರೆಗಳನ್ನು ತುಂಬಿಸುವ ಯೋಜನೆಗೆ ಸಚಿವ ಸಂಪುಟದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು | ಚಿತ್ರದುರ್ಗ ಜಿಲ್ಲೆ, ಹಿರಿಯೂರು ತಾಲ್ಲೂಕು ಜವನಗೊಂಡನಹಳ್ಳಿ ಹೋಬಳಿಯ ಜಲಮೂಲಗಳು (16 ಕೆರೆಗಳು) ಮತ್ತು ಗಾಯಿತ್ರಿ ಜಲಾಶಯಕ್ಕೆ ಕುಡಿಯುವ ನೀರು ತುಂಬಿಸುವ ಹಾಗೂ ಅಂತರ್ಜಲ ಅಭಿವೃದ್ಧಿ ಪಡಿಸುವ ಯೋಜನೆಯ ರೂ.244.00 ಕೋಟಿ ಅಂದಾಜು ಮೊತ್ತದ ಕಾಮಗಾರಿಗೆ ಸರ್ಕಾರದ ಆದೇಶ ಸಂಖ್ಯೆ: MID/407/MISU/2026(P-1), ದಿನಾಂಕ: 21.07.2026 ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ. ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ರವರು ದಿನಾಂಕ:19.08.2026ರನ್ವಯ ಕಾಮಗಾರಿಗೆ ರೂ.244.00 ಕೋಟಿ ಮೊತ್ತದ ಅಂದಾಜು ಪಟ್ಟಿಗೆ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ಸದರಿ ಕಾಮಗಾರಿಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದ ಅನುಸಾರ ಟೆಂಡರ್ ಮೂಲಕ ಕೈಗೊಳ್ಳಲು ಕ್ರಮ ವಹಿಸಲಾಗುತ್ತಿದೆ. |
| ಆ | ಈ ಯೋಜನೆಯನ್ನು ಎಷ್ಟು ದಿನಗಳಲ್ಲಿ ಟೆಂಡರ್ ಪ್ರಕ್ರಿಯೆ ಮೂಲಕ ಪೂರ್ಣಗೊಳಿಸಲಾಗುವುದು; | ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದ ಅನುಸಾರ ಕಾಮಗಾರಿಯ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು. |
| ಇ | ಈ ಯೋಜನೆಗೆ ಯಾವ ಅನುದಾನದಿಂದ ಭರಿಸಲಾಗುವುದು; ಮುಖ್ಯಮಂತ್ರಿಗಳ ವಿವೇಚನಾ ನಿಧಿಯಡಿ ಭರಿಸಲಾಗುವುದೇ ಅಥವಾ ಇತರೆ ಮೂಲ ಯೋಜನೆಗಳಿಂದ ಭರಿಸಲಾಗುವುದೇ ಎಂಬುದರ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು | ಈ ಯೋಜನೆಗೆ ಉಂಟಾಗುವ ವೆಚ್ಚವನ್ನು ಸಣ್ಣ ನೀರಾವರಿ ಇಲಾಖೆಗೆ ಒದಗಿಸಲಾಗುವ ರಾಜ್ಯ ಅನುದಾನದ ಮಿತಿಯೊಳಗೆ ಲೆಕ್ಕಶೀರ್ಷಿಕೆ-4702-ಪ್ರಧಾನ ಕಾಮಗಾರಿಗಳು-ಏತ ನೀರಾವರಿ ಯೋಜನೆಗಳು ರಡಿ ಭರಿಸಲಾಗುವುದು. |
| ಈ | ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಕೆಲಸವನ್ನು ಯಾವ ಕಾಲಮಿತಿಯೊಳಗೆ ಪ್ರಾರಂಭಮಾಡಲಾಗುವುದು ಮತ್ತು ಎಷ್ಟು ದಿನದೊಳಗಾಗಿ ಮುಕ್ತಾಯಗೊಳಿಸಲಾಗುವುದು? (ಮಾಹಿತಿ ಒದಗಿಸುವುದು) | ಯೋಜನೆಯನ್ನು ನಿಯಮಾನುಸಾರ ಟೆಂಡರ್ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ಅರ್ಹತೆ ಹೊಂದಿದ ಗುತ್ತಿಗೆದಾರರೊಂದಿಗೆ ಗುತ್ತಿಗೆ ಕರಾರನ್ನು ನಿರ್ವಹಿಸಿ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. ಕಾಮಗಾರಿಯ ಕರಡು ಟೆಂಡರ್ ನಿಬಂಧನೆಯಂತೆ ಕಾಮಗಾರಿಯನ್ನು ಪ್ರಾರಂಬಿಸಿ ಪೂರ್ಣಗೊಳಿಸಲಾಗುವುದು. |

ಕಡತಸಂಖ್ಯೆ: MID/73/LCQ/2026

(ಡಾ. ಅಜಯ್ ಧರ್ಮಸಿಂಗ್)
ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.